# ಗ್ರ್ಯಾಜುಯೇಶನ್ ಡೇ

## ಇದು ಭಾಗ್ಯ! ಇದು ಭಾಗ್ಯ!



ನಮ್ಮ ಪೂರ್ವಜರ ಕಾಲದಲ್ಲಿ ಗ್ರ್ಯಾಜುಯೇಟ್ ಆದವರಿಗೆ ಮೈಸೂರು ಮಹಾರಾಜರು ಶೇಕ್ ಹ್ಯಾಂಡ್ ಮಾಡ್ತಿದ್ದರಂತೆ. ಆ ಪದ್ಧತಿ ಮುಂದುವರಿಯದೆ, ಇಂದು ಚಿಣ್ಣರ ಕೈಕುಲುಕುವ ಭಾಗ್ಯದಿಂದ ಮಹಾರಾಜರು ವಂಚಿತರಾಗಿದ್ದಾರೆ.

■ ಸುಮಾ ರಮೇಶ್

ಕಳೆದ ವಾರ ನನ್ನ ಹಿರಿಯ ಮಗಳು ಕರೆ ಮಾಡಿ 'ಗ್ರ್ಯಾಜುಯೇಶನ್ ಡೇ'ಗೆ ಆಹ್ವಾನಿಸಿದಾಗ ಅವಳ ಬಗ್ಗೆ ಪ್ರೌಡ್ ಫೀಲ್ ಆಯ್ತು. ಐದು ವರ್ಷದ ಕೂಸನ್ನ ಕಟ್ಕೊಂಡು ಹೊಸ ಡಿಗ್ರಿ ಪಡೆದ ಅವಳ ಚಾತುರ್ಯಕ್ಕೆ ಬೆರಗಾದೆ. ಆದರೆ, ನನ್ನ ಬೆರಗಿಗೇ ಬೆರಗು ನೀಡಿದ್ದು ನಂತರದ ಸುದ್ದಿ. ಪದವಿ ಪ್ರದಾನ ನನ್ನ ಮಗಳಿಗಲ್ಲ, ಅವಳ ಐದು ವರ್ಷದ ಕೂಸಿಗೆ ಎಂಬ ಸ್ಟನ್ನಿಂಗ್ ನ್ಯೂಸ್!

ನನ್ನ ದಿಗ್ಭ್ರಮೆ ಕಂಡು ನಕ್ಕ ಮಗಳು ಕೂಲಾಗಿ, 'ಈಗ ಅದೆಲ್ಲಾ ಕಾಮನ್ ಅಮ್ಮಾ, ಮಾಂಟೆಸರಿ ಮುಗಿದ ಕೂಡಲೇ ಗ್ರ್ಯಾಜುಯೇಶನ್ ಡೇ ಮಾಡ್ತಾರೆ, ನೀವೇ ಬರ್ತೀರಲ್ಲಾ ನೋಡುವಿರಂತೆ' ಎಂದು ಹೇಳಿ ಫೋನಿಟ್ಟಳು. ಅಲ್ಲೇ ಸಿಸ್ಟಮ್ ಮುಂದೆ ಕುಳಿತು ವರ್ಕ್ ಫ್ರಮ್ ಹೋಮ್ ಮಾಡ್ತಾ ಇದ್ದ ಕಿರಿ ಮಗಳು – 'ನಾನೂ ಹರ್ಕೊಂಡು ಹದಿನಾರು ವರ್ಷ ಸ್ಕೂಲು–ಕಾಲೇಜು ಅಂತ ಮಣ್ಣು ಹೊತ್ರೂ ಗ್ರ್ಯಾಜುಯೇಶನ್ ಡೇ ಯೋಗ ಸಿಗ್ಲಿಲ್. ಈ ಮಕ್ಳು ತುಂಬಾ ಲಕ್ಕಿ, ನೆಟ್ಟಗೆ ಒಂದಿನಾನೂ ಸ್ಕೂಲಿಗೇ ಹೋಗಿಲ್ಲ, ಆಗ್ಲೇ ಗ್ರ್ಯಾಜುಯೇಟ್ಸ್! ನಾನೂ ಈ ಜನರೇಷನ್‌ನಲ್ಲಿ ಮಾಂಟೆಸರಿ ಮಾಡ್ಬೇಕಿತ್ತು' ಎಂದು ಕನಲಿದಳು.

ಕಳೆದೆರಡು ವರ್ಷಗಳ ಕೊರೊನಾ ಸಮಸ್ಯೆಯಿಂದ ಬಿ.ಇ. ಮುಗಿಸಿದ ಹಲವು ಬ್ಯಾಚಿನ ವಿದ್ಯಾರ್ಥಿಗಳ ಪದವಿ ಪ್ರಧಾನ ವರ್ಚುವಲ್ ಆಗಿಯೇ ನಡೆದು, ಅವರ ದೇಹ ಹಾಗೂ ತಲೆಗೆ ಕಾನ್ವೊಕೇಶನ್ ಗೌನ್ ಹಾಗೂ ಕ್ಯಾಪಿನ ಭಾಗ್ಯ ದೊರೆಯದಂತಾಯಿತು. ಆನ್‌ಲೈನ್ ಕ್ಲಾಸ್ ನೆಪದಲ್ಲಿ ಸ್ಕೂಲ್ ಮೆಟ್ಟಿಲನ್ನೇ ತುಳಿಯದ ಮಾಂಟೆಸರಿ